ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 18 ನೇ ಮಾರ್ಚ್, 2020

ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಆರ್.ಟಿ.ಸಿ. ಯಲ್ಲಿ ತೋಟಗಾರಿಕೆ ಬೆಳೆ ನಮೂದನ್ನು ಪ್ರತಿ 6 ತಿಂಗಳಿಗೊಮ್ಮೆ ಸೇರಿಸುವ ನಿಯಮವನ್ನು ಕೈಬಿಡುವ ಬಗ್ಗೆ

ಶ್ರೀಮತಿಎಸ್.ವೀಣಾಅಚ್ಚಯ್ಯ(ವಿಧಾನಸಭೆಯಿಂದಚುನಾಯಿತರಾದವರು):-

1190 (1369) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಹು ವಾರ್ಷಿಕ ತೋಟಗಾರಿಕೆ ಬೆಳೆಗಳನ್ನು ಹೆಚ್ಚು ಬೆಳೆಯುವ ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ರೈತರ ಆರ್.ಟಿ.ಸಿ. ಗಳಲ್ಲಿ ಪ್ರತಿ 6 ತಿಂಗಳಿಗೊಮ್ಮೆ ಬೆಳೆ ನಮೂದು ಮಾಡಬೇಕಾಗಿರುವ ನಿಯಮದಿಂದಾಗಿ ರೈತರಿಗೆ ಬ್ಯಾಂಕ್ ಹಾಗೂ ಸಹಕಾರ ಸಂಘಗಳಿಂದ ಸಾಲ, ಸೌಲಭ್ಯಗಳನ್ನು ಪಡೆಯಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಬಹುವಾರ್ಷಿಕ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರ ಆರ್.ಟಿ.ಸಿ. ಗಳಲ್ಲಿ ಪ್ರತಿ 6 ತಿಂಗಳಿಗೆ ಬೆಳೆ ನಮೂದು ಮಾಡಬೇಕಾಗಿರುವ ಪ್ರಸ್ತುತ ಇರುವ ನಿಯಮಗಳನ್ನು ಕೈಬಿಡಲಾಗುವುದೇ ;

(ಇ) ಇದಕ್ಕೆ ಸಂಬಂಧಿಸಿದ ತಂತ್ರಾಂಶದ ಮೂಲಕ ಪಡೆಯುವ ಆರ್.ಟಿ.ಸಿ. ಗಳಲ್ಲಿ 6 ತಿಂಗಳ ನಂತರ ಬೆಳೆ ನಮೂದು ಕಾಲಂನಲ್ಲಿ ಯಾವುದೇ ನಮೂದು ಇಲ್ಲದಂತೆ ಬದಲಾವಣೆ ಮಾಡಲಾಗುವುದೇ?